ದಿನಾಂಕ: ಮಾರ್ಚ್ 13, 2014

# ಮರುಕಳಿಸಿದ ಮಾವೋವಾದಿಗಳ ಉಪಟಳ

ಅರುಣ್ ಜೇಟ್ಲಿ
(ವಿರೋಧ ಪಕ್ಷದ ನಾಯಕರು, ರಾಜ್ಯ ಸಭಾ)

ಮಾವೋವಾದಿಗಳು ಪುನಃ ದಾಳಿ ನಡೆಸಿದ್ದಾರೆ. ಸಿಆರ್‌ಪಿಎಫ್ ಹಾಗೂ ಛತ್ತೀಸ್‌ಗಡ್ ಪೋಲೀಸ್ ಇಲಾಖೆಗೆ ಸೇರಿದ ಹಲವಾರು ಪೋಲೀಸರು ಜೀವ ಕಳೆದುಕೊಂಡಿದ್ದಾರೆ. ಭಾರತದ ರಕ್ಷಣೆಯಲ್ಲಿ ಹುತಾತ್ಮರಾಗಿದ್ದಾರೆ.

ಭಾರತಕ್ಕೆ ಎದುರಾದ ಮಾವೋವಾದಿಗಳ ಭೀತಿ ಗಂಭೀರ ಸಮಸ್ಯೆಯಾಗಿ ಮುಂದುವರಿದಿದೆ. ಭಾರತದ ಕೇಂದ್ರದಲ್ಲಿ, ಬುಡಕಟ್ಟು ಪ್ರದೇಶಗಳ ಮಧ್ಯರಂಗದಲ್ಲಿ ಹಲವಾರು ಜಿಲ್ಲೆಗಳು ಮಾವೋವಾದಿಗಳ ನಿಯಂತ್ರಣ ಹಾಗೂ ಪ್ರಭಾವಕ್ಕೆ ಒಳಗಾಗಿವೆ. ಈ ಪ್ರದೇಶಗಳಲ್ಲಿ ಮಾವೋವಾದಿಗಳ ಪ್ರಾಬಲ್ಯವಿದೆ. ಈ ಪ್ರದೇಶದಲ್ಲಿ ಸಾಮಾನ್ಯ ನಾಗರಿಕ ಶೋಷಣೆಗೆ ಒಳಗಾಗಿದ್ದಾನೆ. ಜಿಲ್ಲಾ ಆಡಳಿತದ ನಿಯಂತ್ರಣ ಕನಿಷ್ಠಕ್ಕೆ ಕುಗ್ಗಿದೆ. ಮಾವೋವಾದಿಗಳೇ ಇಲ್ಲಿ ತೆರಿಗೆ ಸಂಗ್ರಿಹಿಸುತ್ತಾರೆ. ಪ್ರತಿ ಗ್ರಾಮದಲ್ಲೂ ಅವರು ಸಂಬಳಕ್ಕೆ ತಮ್ಮ ಜನರನ್ನು ಇಟ್ಟಿದ್ದಾರೆ. ಅವರಲ್ಲಿ ಅಪಾರ ಮದ್ದುಗುಂಡುಗಳವೆ. ಮಾವೋವಾದಿಗಳು ದಾರಿತಪ್ಪಿದ ತತ್ವವಾದಿಗಳಲ್ಲ. ಅವರು ಸಾಮಾಜಿಕ ಸುಧಾರಕರೂ ಅಲ್ಲ. ಮಾವೋವಾದವು ಬಡತನ ನಿರ್ಮೂಲನೆಯ ಯೋಜನೆಯೂ ಅಲ್ಲ. ಭಾರತದ ಸಂಸದೀಯ ಪ್ರಜಾಪ್ರಭುತ್ವವನ್ನು ತೊಲಗಿಸಿ ಸೈಧಾಂತಿಕ ಸರ್ವಾಧಿಕಾರ ಸಾಧಿಸುವ ಹುನ್ನಾರ ಅವರದ್ದಾಗಿದೆ. ಮಾವೋವಾದಿಗಳ ಆಲೋಚನ ಪರಧಿಗೆ ಪ್ರಜಾಪ್ರಭುತ್ವ, ಸ್ವಾತಂತ್ರ್ಯಜೀವನ ಹಾಗೂ ಮುಕ್ತ ನಡೆಯ ಹಕ್ಕು, ಕಾನೂನು ಮತ್ತು ವಾಕ್ ಸ್ವಾತಂತ್ರ್ಯಗಳು ಬರುವುದಿಲ್ಲ. ವಿಶ್ವದೆಲ್ಲೆಡೆ ಕಾಣುವಂತೆ, ಜನರನ್ನು ಆತಂಕಕ್ಕೆ ಎಡೆಮಾಡಿಕೊಡುವ ಸೈಧಾಂತಿಕ ಸರ್ವಾಧಿಕಾರ ಸಾಧಿಸುವ ಪ್ರಯತ್ನ ನಡೆದಿದೆ.

ಮಾವೋವಾದಿಗಳನ್ನು ಹತ್ತಿಕ್ಕುವ ಮಾರ್ಗ ಯಾವುದು? ಮಾವೋವಾದಿಗಳ ಪ್ರಭಾವವಿರುವ ಪ್ರದೇಶಗಳ ಆರ್ಥಿಕ ಸುಧಾರಣೆಯಿಂದಲೇ ಅವರ ಉಪಟಳಕ್ಕೆ ನಾಂದಿ ಹಾಡಬಹುದು ಎಂದು ಕೆಲವಾರು ನೊಂದ ವರ್ಗಗಳು ಅಭಿಪ್ರಾಯ ಪಟ್ಟಿವೆ. ಆದರೆ ಈ ಅಭಿಪ್ರಾಯ ಅರ್ಧಸತ್ಯವೂ ಅಲ್ಲ. ಮಾವೋ ಪ್ರಭಾವವಿರುವ ಪ್ರದೇಶಕ್ಕೆ ಸರ್ಕಾರ ಪ್ರವೇಶ ಪಡೆಯಬೇಕಾದರೆ ಅದಕ್ಕೆ ಮುನ್ನ ಅಲ್ಲಿ ಶಾಂತಿ ನೆಲಸಬೇಕು ಎಂಬ ಪೂರ್ವ ಶರತ್ತು ವಿಧಿಸಬೇಕಾಗುತ್ತದೆ. ಭೂ ಸ್ಫೋಟಕಗಳನ್ನು ತೆರವುಗೊಳಿಸಬೇಕಾಗುತ್ತದೆ. ಖಾಸಗಿ ಸೇನೆಗಳ ನಿಯಂತ್ರಣದಲ್ಲಿರುವ ಬಂದೂಕುಗಳನ್ನು ವಶಕ್ಕೆ ಪಡೆಯಬೇಕಾಗುತ್ತದೆ. ಸಾಮಾನ್ಯ ಜನರಿಂದ ಹಣ ಕೀಳುವ ಕೃತ್ಯ ನಿಲ್ಲಬೇಕಾಗುತ್ತದೆ. ಇಲ್ಲದಿದ್ದರೆ ಶಾಲಾ ಕಾಲೇಜುಗಳು, ಆಸ್ಪತ್ರೆಗಳು, ಪಂಚಾಯತ್ ಭವನಗಳನ್ನು ನಿರ್ಮಿಸಿ ಅಭಿವೃದ್ಧಿ ಚಟುವಟಿಕೆಗಳನ್ನು ಕೈಗೊಳ್ಳಲು ಜಿಲ್ಲಾ ಆಡಳಿತ ಹಾಗೂ ಲೋಕೋಪಯೋಗಿ ಇಲಾಖೆ ಗುತ್ತಿಗೆದಾರರು ಆ ಪ್ರದೇಶಗಳಿಗೆ ಪ್ರವೇಶ ಪಡೆಯಲು ಹೇಗೆ ಸಾಧ್ಯ.

ಅಸ್ತ್ರಗಳು ಹಾಗೂ ಮದ್ದು ಗುಂಡುಗಳ ವಿತರಕರನ್ನು ಮಟ್ಟ ಹಾಕುವ ಆವಶ್ಯಕತೆಯಿದೆ. ಗಡಿಯಾಚೆಯಿಂದ ಕಳ್ಳಸಾಗಾಣಿಕೆ ಮೂಲಕ ಅಥವಾ ಪೋಲಿಸರಿಂದ ಲೂಟಿಮಾಡುವ ಮೂಲಕ ಅಸ್ತ್ರಗಳನ್ನು ಮಾವೋವಾದಿಗಳು ಪಡೆಯುತ್ತಿದ್ದಾರೆ. ಶತ್ರುಗಳ ಅಸ್ತ್ರಗಳು ತಮ್ಮವೇ ಎಂಬ

ಭಾವನೆಯನ್ನು ಮಾವೋವಾದಿಗಳು ಬೆಳೆಸಿಕೊಂಡಿದ್ದಾರೆ. ಈ ವಿಚಾರದಲ್ಲಿ ರಾಷ್ಟ್ರ ಹಾಗೂ ಅಲ್ಲಿಯ ಪೋಲೀಸರೇ ಅವರ ಪರಮ ಶತ್ರುಗಳು.

ಜನಸಾಮಾನ್ಯರು ಹಾಗೂ ಭದ್ರತಾ ಪಡೆ ಸಿಬ್ಬಂದಿಗಳ ಜೀವಗಳು ಹಿಂಸಾಚಾರಕ್ಕೆ ತುತ್ತಾಗುತ್ತಿರುವುದನ್ನು ಭಾರತ ಇನ್ನೆಷ್ಟು ದಿವಸ ಸಹಿಸಲು ಸಾಧ್ಯ? ಈ ಪ್ರಾಂತ್ಯದ ಅಭಿವೃದ್ಧಿ ಉದ್ದೇಶಗಳನ್ನು ಇನ್ನೆಷ್ಟು ದಿವಸ ತಡೆಹಿಡಿಯಲು ಸಾಧ್ಯ? ಬುಡಕಟ್ಟು ಜನಾಂಗದ ಕಲ್ಯಾಣಕ್ಕಾಗಿ ನಿರ್ಮಿಸಲಾದ ಕಟ್ಟಡಗಳು ಹಾಗೂ ಅನ್ಯ ಸ್ವತ್ತನ್ನು ಧ್ವಂಸಗೊಳಿಸುವ ಅವಕಾಶವನ್ನು ನಾವು ನೀಡಬಹುದೇ? ರಾಷ್ಟ್ರೀಯ ಸಂಪನ್ಮೂಲಗಳ ಮೇಲೆ ಬುಡಕಟ್ಟು ಜನಾಂಗ ಮೊದಲ ಹಕ್ಕು ಹೊಂದಿದೆ ಎಂಬ ಸ್ಪಷ್ಟ ನಿಲವನ್ನು ನಾವು ಈ ಮೊದಲು ತಾಳಬೇಕು. ಮಾವೋವಾದಿಗಳ ಪ್ರಭಾವದಿಂದ ಮೊದಲು ಬುಡಕಟ್ಟು ಜನಾಂಗವನ್ನು ಮುಕ್ತಗೊಳಿಸಬೇಕು. ಮಾವೋವಾದಿಗಳ ವಿರುದ್ಧದ ಯುದ್ಧ ಪೂರ್ಣ ಸಂಕಲ್ಪದೊಂದಿಗೆ ನಡೆಯಬೇಕು. ಅವರನ್ನು ಮಟ್ಟ ಹಾಕಲು ಭಾರತದ ಸಂಪೂರ್ಣ ಶಕ್ತಿಯನ್ನು ಬಳಸಬೇಕು.

************